# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 32/2025**

| | | |
|---|---|---|
| ಹೆಸರು | : ಹನಮಂತ ಮಾದರಿ | ಫ್ರಾಸಾ–6 |
| ತಂದೆಯ ಹೆಸರು | : ಚಿದಾನಂದ | ಚಾಸಾ– 10 |
| ವರ್ಷ | : 13 ವರ್ಷ | |
| ಉದ್ಯೋಗ | : ವಿದ್ಯಾರ್ಥಿ | |
| ವಿಳಾಸ | : ನಾಗರಾಳ ತಾಃ ಬೀಳಗಿ | |

ದಿಃ 12.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

**ಸಾಕ್ಷಿ ಅಪ್ರಾಪ್ತ ವಯಸ್ಕನಾಗಿದ್ದು, ಆತ ಸಾಕ್ಷಿ ನುಡಿಯಲು ಸಮರ್ಥಳಿರುತ್ತಾನೆ ಎಂದು ತಿಳಿಯಲು ಈ ಕೆಳಗಿನ ಪ್ರಶ್ನೆಗಳನ್ನು ಕೇಳಲಾಯಿತು.**

ಪ್ರಶ್ನೆ ನಂ.1. ಈಗ ನೀನು ಎಲ್ಲಿದ್ದೀಯಾ?
ಉತ್ತರಃ ಕೋರ್ಟನಲ್ಲಿದ್ದೇನೆ.
ಪ್ರಶ್ನೆ ನಂ.2. ನಿನ್ನ ತಂದೆ ಏನು ಮಾಡುತ್ತಾರೆ?
ಉತ್ತರಃ ಒಕ್ಕಲುತನ
ಪ್ರಶ್ನೆ ನಂ.3. ನೀನು ಎಷ್ಟನೇ ತರಗತಿಯಲ್ಲಿ ಓದುತ್ತಿದ್ದೀಯಾ?
ಉತ್ತರಃ 6 ನೇ ತರಗತಿ
ಪ್ರಶ್ನೆ ನಂ.4. ನ್ಯಾಯಾಲಯದಲ್ಲಿ ನಿಜ ಹೇಳಬೇಕೊ, ಸುಳ್ಳು ಹೇಳಬೇಕೊ?
ಉತ್ತರಃ ನಿಜ ಹೇಳಬೇಕು.
ಪ್ರಶ್ನೆ ನಂ.5. ಸುಳ್ಳು ಹೇಳಿದರೆ ಏನಾಗುತ್ತದೆ?
ಉತ್ತರಃ ಸುಳ್ಳು ಹೇಳಿದರೆ ದೇವರು ಶಿಕ್ಷೆ ಕೊಡುತ್ತಾನೆ.

ಸಾಕ್ಷಿಗೆ ನ್ಯಾಯಾಲಯವು ಕೇಳಿದ ಪ್ರಶ್ನಗಳು ಅರ್ಥವಾಗಿದ್ದು, ಸಾಕ್ಷ್ಯ ನುಡಿಯಲು ಸಕ್ಷಮಳಾಗಿದ್ದಾಳೆ ಎಂದು ತೀರ್ಮಾಣಿಸಲಾಯಿತು ಹಾಗೂ ಪ್ರಮಾಣ ವಚನ ಮಹತ್ವ ಅರಿತಿರುವುದರಿಂದ ಪ್ರಮಾಣ ವಚನ ಬೋಧಿಸಲಾಯಿತು.

ನನಗೆ ಚಾಸಾ-11/ಚಿದಾನಂದ, ಚಾಸಾ-12/ಸಿದ್ದಾರ್ಥ ನನಗೆ ಗೊತ್ತು, ಅವರು ನನ್ನ ಗೆಳೆಯರು. ನಾನು ಕಳೆದ ವರ್ಷ ರಾಧಾಕೃಷ್ಣ ಹಿರಿಯ ಪ್ರಾಥಮಿಕ ವಸತಿ ಶಾಲೆಯಲ್ಲಿ 5 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆನು. ಆ ಸಮಯದಲ್ಲಿ ಚಾಸಾ-11 ಮತ್ತು 12 ರವರು ಸಹ 5 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ನಮ್ಮ ಶಾಲೆಗೆ ಚಾಸಾ-17 ರವರು ಮುಖ್ಯೋಪಾದ್ಯಾಯರಾಗಿದ್ದರು. ಸದರಿ ಶಾಲೆ ಚಾಸಾ-16/ದೇಶಪಾಂಡೆ ರವರಿಗೆ ಸೇರಿದ ಶಾಲೆ. ಮೃತ ನಾಗಪ್ಪ ತೋಳಮಟ್ಟಿ ಎನ್ನುವವರು ನನಗೆ ಗೊತ್ತು, ಆತ ನಮ್ಮ ಶಾಲೆಯಲ್ಲಿ ಕಾವಲುಗಾರ ಅಂತಾ ಕೆಲಸ ಮಾಡುತ್ತಿದ್ದರು. ನ್ಯಾಯಾಲಯದ ಮುಂದಿರುವ ಆರೋಪಿ/ಧನರಾಜ ರಾಠೋಡ ನನಗೆ ಗೊತ್ತು. ಅವರು ಮುರಾರ್ಜಿ ಮತ್ತು ನವೋದಯ ಶಾಲೆಗೆ ಆಯ್ಕೆ ಆಗಲು ತರಬೇತಿ ನೀಡುತ್ತಿದ್ದರು.

2. ದಿಃ12.01.2025 ರಂದು ಬೆಳಿಗ್ಗೆ 6-00 ಗಂಟೆಗೆ ಆರೋಪಿ/ಧನರಾಜ ಮತ್ತು ಮೃತ ನಾಗಪ್ಪ ರವರಿಗೆ ರಾಧಾಕೃಷ್ಣ ಶಾಲೆಯ ಪಕ್ಕದಲ್ಲಿರುವ ಶೆಡ್ ನ ಹತ್ತಿರ ನೀರು ಕಾಯಿಸುವ ವಿಚಾರವಾಗಿ ಜಗಳವಾಗುತ್ತಿತ್ತು. ಆ ಸಮಯದಲ್ಲಿ ನಾನು, ಚಾಸಾ-11 ಮತ್ತು 12 ರವರು ಸಹ ಸ್ಥಳದಲ್ಲಿ ಇದ್ದೆವು. ಜಗಳದಲ್ಲಿ ಆರೋಪಿ ಉರಿಯುವ ಸೌದೆ ಕಟ್ಟಿಗೆಯಿಂದ ನಾಗಪ್ಪನ ತಲೆಗೆ ಹೊಡೆದಿರುತ್ತಾರೆ. ಸದರಿ ಏಟಿನಿಂದ ನಾಗಪ್ಪರವರ ತಲೆಗೆ ಪೆಟ್ಟಾಗಿ ಸ್ಥಳದಲ್ಲಿ ಬಿದ್ದಿರುತ್ತಾರೆ. ಆರೋಪಿ ನಾಗಪ್ಪನ ತಲೆಗೆ ಹೊಡೆದ ನಂತರ ನಾವು ಅಂಜಿ ನಮ್ಮ ಶಾಲೆ ಒಳಗೆ ಹೋಗಿರುತ್ತೇವೆ. ನಂತರ ನಾಗಪ್ಪನನ್ನು ಅಂಬ್ಯುಲೆನ್ಸನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ತಿಳಿದು ಬಂದಿತು. ನಂತರ ನಾಗಪ್ಪ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ ಎಂದು ತಿಳಿದು ಬಂದಿತು. ಆರೋಪಿ ಹಲ್ಲೆ ಮಾಡಲು ಉಪಯೋಗಿಸಿದ ಉರಿಯುವ ಸೌದೆ ಕಟ್ಟಿಗೆ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಕಟ್ಟಿಗೆ ನೇಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾಲು-2 ಎಂದು ಗುರುತಿಸಲಾಗಿದೆ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ ಶ್ರೀ. ಪಿ ಹೆಚ್ ಎಂ ವಕೀಲರಿಂದ ಆರೋಪಿ ಪರ**

ನನ್ನ ತಂದೆ-ತಾಯಿಗೆ ನಾವು ಒಟ್ಟು 3 ಜನ ಮಕ್ಕಳು, ನಾನು ಕೊನೆಯ ಮಗ. ರಾಧಾಕೃಷ್ಣ ಶಾಲೆಯಲ್ಲಿ ಒಟ್ಟು ಎಷ್ಟು ಕೊಠಡಿಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ಶಾಲೆಯ ಸುತ್ತಲೂ ಕಂಪೌಂಡ ಸುಮಾರು 5 ಅಡಿ ಇರುತ್ತದೆ. ಆರೋಪಿ ಶಾಲೆಯಲ್ಲಿ ರಾತ್ರಿ ವೇಳೆಯಲ್ಲಿ ಮೋರಾರ್ಜಿ ಹಾಗೂ ನವೋದಯ ಶಾಲೆಗಳಿಗೆ ಭರ್ತಿ ಆಗಲು ತರಬೇತಿ ನೀಡುತ್ತಿದ್ದರು. ಸದರಿ ಶಾಲೆಯಲ್ಲಿ ಆರೋಪಿ ಸುಮಾರು 24 ಜನಕ್ಕೆ ತರಬೇತಿ ನೀಡುತ್ತಿದ್ದರು. ರಾಧಾಕೃಷ್ಣ ಶಾಲೆಯ ಹಾಸ್ಟೇಲ್ ನಲ್ಲಿ ಸುಮಾರು 6-7 ಜನ ಇದ್ದೆವು.

2. ದಿಃ 11.01.2025 ರಂದು ನಾವು ಶಾಲೆಯ ಹಾಸ್ಟೆಲ್ ನಲ್ಲಿ 4 ಜನ ಇದ್ದೆವು. ಸದರಿ ದಿನ ಬೇರೆ ಮಕ್ಕಳು ಶಾಲೆಯಲ್ಲಿ ಇರಲಿಲ್ಲ. ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ''ನಾನು ಚಿದಾನಂದ ಮಾದರ ಮತ್ತು ಸಿದ್ದಾರ್ಥ ಹಾಗೂ ಇನ್ನೂ 3-4 ಜನ ಹುಡುಗರು ಶಾಲೆಯಲ್ಲಿಯೆ ಉಳಿದುಕೊಂಡೆವು '' ಎಂದು ಹೇಳಿಕೆ ನೀಡಿರುವುದಿಲ್ಲ. ಸದರಿ ಹೇಳಿಕೆ ಭಾಗವನ್ನು **ನಿಶಾನೆ ಡಿ-1** ಎಂದು ಗುರುತಿಸಲಾಯಿತು.

3. ದಿಃ 12.01.2025 ರಂದು ಬೆಳಿಗ್ಗೆ 6 ಗಂಟೆಗೆ ಮೃತ ನಾಗಪ್ಪ ಎಚ್ಚರಗೊಂಡಿರಲಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ನಾವು ಬೆಳಿಗ್ಗೆ 6 ಗಂಟೆಗೆ ಶಾಲೆ ಒಳಗೆ ನಾವು ಅಡ್ಡಾಡುತ್ತಿದ್ದಾಗ ನಾಗಪ್ಪ ನಮಗೆ ಶಾಲೆ ಒಳಗೆ ಹೋಗುವಂತೆ ನಮಗೆ ಬೈದು ಕಳುಹಿಸಿರುತ್ತಾರೆ. ನಂತರ ನಾವು ಶಾಲೆ ಒಳಗೆ ಹೋಗಿರುತ್ತೇವೆ. ಆರೋಪಿ ನಾಗಪ್ಪನಿಗೆ ಸದರಿ ಸಮಯದಲ್ಲಿ ಮಕ್ಕಳಿಗೆ ನೀರು ಕಾಯಿಸಿರುವುದಿಲ್ಲ ಮತ್ತು ಸ್ವಚ್ಛ ಮಾಡಿರುವುದಿಲ್ಲ ಎಂದು ಬೈಯುತ್ತಿದ್ದನು ಎಂದರೆ ಸರಿ. ಆಗ ನಾಗಪ್ಪ ಆರೋಪಿಗೆ ನೀನು ಯಾರು ಕೇಳಲು ಎಂದು ಬೈದಿರುತ್ತಾನೆ ಮತ್ತು ಉರಿಯುವ ಕಟ್ಟಿಗೆಯಿಂದ ಆರೋಪಿಯ ಕೈ ಮೇಲೆ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿ. ಸದರಿ ಹಲ್ಲೆಯಿಂದ ಆರೋಪಿಯ ಬಲಗೈ ಸುಟ್ಟಿರುತ್ತದೆ ಎಂದರೆ ಸರಿ. ನಂತರ ಮತ್ತಮ್ಮೆ ನಾಗಪ್ಪ ಆರೋಪಿಯ ತಲೆ ಮೇಲೆ ಕಟ್ಟಿಗೆಯಿಂದ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಹಲ್ಲೆಯಿಂದ ಆರೋಪಿಯ ತಲೆ ಮೇಲೆ ರಕ್ತಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಸದರಿ ಹಲ್ಲೆಯನ್ನು ತಡೆಯಲು ಹೋಗಿ ನಾಗಪ್ಪನನ್ನು ತಳ್ಳಿದಾಗ ನಾಗಪ್ಪ ಬಿದ್ದು ಆತನ ತಲೆ ಕಲ್ಲಿಗೆ ಬಡಿದು ಹಿಂಭಾಗಕ್ಕೆ ಪೆಟ್ಟು ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಬಿದ್ದಿದ್ದ ಕಲ್ಲಿಗೆ ರಕ್ತ ಹತ್ತಿತ್ತು ಎಂದರೆ ಸರಿ. ಸ್ಥಳಕ್ಕೆ ಬಂದ ಜನರು ನಾಗಪ್ಪ ಕಲ್ಲಿಗೆ ಬಿದ್ದು ಪೆಟ್ಟು ಮಾಡಿಕೊಂಡಿರುತ್ತಾನೆ ಎಂದು ಮಾತನಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

4. ಈ ದಿನ ನ್ಯಾಯಾಲಯಕ್ಕೆ ನನ್ನ ತಂದೆ ಜೊತೆ ಬಂದಿರುತ್ತೇನೆ. ನನ್ನ ತಂದೆ ಹೇಳಿಕೊಟ್ಟಂತೆ ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿ ನಾಗಪ್ಪನಿಗೆ ಬಡಿಗೆಯಿಂದ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾಗಪ್ಪ ಕಲ್ಲಿನ ಮೇಲೆ ಬಿದ್ದು ಪೆಟ್ಟು ಮಾಡಿಕೊಂಡು ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 32/2025**

| | | | |
|---|---|---|---|
| ಹೆಸರು | : ಯಲ್ಲಪ್ಪ ಕರಿಗಾರ | | ಫ್ರಾಸಾ-5 |
| ತಂದೆಯ ಹೆಸರು | : ಕರೆಪ್ಪ | | ಚಾಸಾ-8 |
| ವರ್ಷ | : 31 ವರ್ಷ | | |
| ಉದ್ಯೋಗ | : ಒಕ್ಕಲುತನ | | |
| ವಿಳಾಸ | : ನಾಗರಾಳ ತಾಃ ಬೀಳಗಿ | | |

ದಿಃ 12.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

ದಿಃ 14.01.2025 ರಂದು ಬೆಳಿಗ್ಗೆ ಸುಮಾರು 11 ಗಂಟೆಗೆ ಬೀಳಗಿಯ ಸಮಾಜ ಕಲ್ಯಾಣ ಇಲಾಖೆಯ ಹತ್ತಿರ ನಾನು ಮತ್ತು ಚಾಸಾ-9 ರವರು ಇದ್ದಾಗ ಬೀಳಗಿ ಪೊಲೀಸ ಠಾಣಾ ಸಿಬ್ಬಂದಿ ಚಾಸಾ-8/ ಭಜಂತ್ರಿ ರವರು ನಮ್ಮನ್ನು ಠಾಣೆಗೆ ಕರೆದುಕೊಂಡು ಹೋಗಿದ್ದು, ಠಾಣೆಯಲ್ಲಿ ನಮಗೆ ಆರೋಪಿ/ಧನರಾಜ ರವರನ್ನು ತೋರಿಸಿ, ಆರೋಪಿ ಕೊಲೆ ಮಾಡಿದ ಸ್ಥಳವನ್ನು ತೋರಿಸುವದಾಗಿ ಪೊಲೀಸರ ಮುಂದೆ ಹೇಳಿದ್ದು, ಸದರಿ ಪಂಚನಾಮೆ ಕಾಲಕ್ಕೆ ನಮಗೆ ಪಂಚರಾಗಿ ಸಹಕರಿಸಲು ಕೋರಿ, ನಮಗೆ ನೋಟಿಸ ಕೊಡಲಾಯಿತು. ಸಾಕ್ಷಿ ಸದರಿ ನೋಟಿಸನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಂತರ ಪಂಚರಾದ ನಾವು, ಆರೋಪಿ, ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿ ಸೇರಿ ಖಾಸಗಿ ಇನೊವಾ ವಾಹನದಲ್ಲಿ, ಆರೋಪಿ ತೋರಿಸಿದಂತೆ ಮೊದಲು ನಾಗರಾಳದ ರಾಧಾಕೃಷ್ಣ ಹಿರಿಯ ಫ್ರಾಥಮಿಕ ಶಾಲೆಗೆ ಕರೆದುಕೊಂಡು ಹೋಗಿ, ಆರೋಪಿ ನಮ್ಮನ್ನು ಸದರಿ ಶಾಲೆಯ ಪಕ್ಕದಲ್ಲಿ ಇದ್ದ ಶೆಡ್ ನ ಹತ್ತಿರ ಕರೆದುಕೊಂಡು ಹೋಗಿ, ಅಲ್ಲಿ ಇದ್ದ ಕಲ್ಲಿನ ಒಲೆಯನ್ನು ತೋರಿಸಿ ಇಲ್ಲಿಯೆ ಆತನು ನಾಗಪ್ಪನ ಮೇಲೆ ಕಟ್ಟಿಗೆಯಿಂದ ಹಲ್ಲೆ ಮಾಡಿದ ಸ್ಥಳ ಎಂದು ತೋರಿಸಿರುತ್ತಾನೆ. ಸದರಿ ವಿಚಾರವಾಗಿ ತನಿಖಾಧಿಕಾರಿ ರವರು ನಮ್ಮ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿರುತ್ತಾರೆ. ಸಾಕ್ಷಿ ಸದರಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-9 ಎಂದು, ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನಿಶಾನೆ ಪಿ-9 ಪಂಚನಾಮೆ ಕಾಲಕ್ಕೆ ಎರಡು ಭಾವಚಿತ್ರಗಳನ್ನು ತೆಗೆಯಲಾಯಿತು. ಸಾಕ್ಷಿ ಗುರುತಿಸಿದ ಎರಡು ಭಾವಚಿತ್ರಗಳನ್ನು ಒಟ್ಟಾಗಿ ನಿಶಾನೆ ಪಿ- 10 ಎಂದು ಗುರುತಿಸಲಾಯಿತು.

2. ನಂತರ ಆರೋಪಿ ನಮ್ಮನ್ನು ಅಲ್ಲಿಂದ ದೇವರಗಾಣಗಾಪೂರ ಗ್ರಾಮದಲ್ಲಿರುವ ಯೋಗಿರಾಜ ಮಠಕ್ಕೆ ಕರೆದುಕೊಂಡು ಹೋಗಿ, ಸದರಿ ಮಠದ ಪಶ್ಚಿಮಕ್ಕೆ ಇದ್ದ ಒಂದು ಕೊಠಡಿಗೆ ಕರೆದುಕೊಂಡು ಹೋಗಿ, ಒಂದು ಕಪಾಟಿನಲ್ಲಿ ಇಟ್ಟಿದ್ದ ಒಂದು ಬ್ಯಾಗ್ ನ್ನು ತೆಗೆದು, ಅದರಲ್ಲಿದ್ದ ಒಂದು ಟಿ-ಶರ್ಟ ಮತ್ತು ಒಂದು ಜಾಕಿ ಕಂಪನಿ

ಚಡ್ಡಿ, ಕರವಸ್ತ್ರ ವನ್ನು ಹಾಜರುಪಡಿಸಿ, ಇದೇ ವಸ್ತುಗಳನ್ನು ಆತನು ಘಟನಾ ಸಮುಯದಲ್ಲಿ ಧರಿಸಿದ್ದ ವಸ್ತುಗಳು ಎಂದು ತಿಳಿಸಿರುತ್ತಾನೆ. ನಂತರ ಸದರಿ ಒಂದು ಟಿ-ಶರ್ಟ ಮತ್ತು ಒಂದು ಜಾಕಿ ಕಂಪನಿ ಚಡ್ಡಿ, ಕರವಸ್ತ್ರ ಗಳನ್ನು ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ, ಜಪ್ತಿ ಪಡಿಸಿಕೊಂಡಿರುತ್ತಾರೆ. ಸಾಕ್ಷಿ ಸದರಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-11 ಎಂದು, ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನಿಪಿ-11 ಪಂಚನಾಮೆ ಕಾಲಕ್ಕೆ ತೆಗೆದ 3 ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಶಾನೆ ಪಿ-12 ಎಂದು ಗುರುತಿಸಲಾಯಿತು. ನಿಪಿ-11 ಪಂಚನಾಮೆ ಕಾಲಕ್ಕೆ ಜಪ್ತಿ ಪಡಿಸಿಕೊಂಡ ಬಟ್ಟೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾಲು-9 ರಿಂದ 11 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ. ಪಿ ಹೆಚ್ ಎಂ ವಕೀಲರಿಂದ ಆರೋಪಿ ಪರ**

ನನ್ನ ಸ್ವಂತ ಊರು ನಾಗರಾಳ ಎಂದರೆ ಸರಿ. ನಾಗರಾಳ ಗ್ರಾಮದ ದಕ್ಷಿಣಕ್ಕೆ ರಾಧಾಕೃಷ್ಣ ಶಾಲೆ ಬರುತ್ತದೆ. ಸದರಿ ಶಾಲೆಯ ಸುತ್ತಲೂ 5-6 ಪೂಟ್ ಎತ್ತರದ ಗೋಡೆ ಇರುತ್ತದೆ ಎಂದರೆ ಸರಿ. ರಾಧಾಕೃಷ್ಣ ಶಾಲೆಯ ಉತ್ತರಕ್ಕೆ ಸುಮಾರು 25 ಅಡಿ ಅಂತರದಲ್ಲಿ ಶೆಡ್ ಇರುತ್ತದೆ. ಸದರಿ ಶೆಡ್ ನಲ್ಲಿ ಶಾಲೆಗೆ ಬೇಕಾಗುವ ಕಲ್ಲು ಕಟ್ಟಿಗೆ ಹಾಗೂ ಇತರೆ ಸಾಮಾನುಗಳನ್ನು ಇಡಲಾಗಿತ್ತು ಎಂದರೆ ಸರಿ. ಬೀಳಗಿ ಪೊಲೀಸರು ನನಗೆ ಠಾಣೆಗೆ ಬರಲು ಹೇಳಿದಾಗ ನನಗೆ ನೋಟಿಸ ಕೊಡಲಿಲ್ಲ, ಆದರೆ ಠಾಣೆಗೆ ಕರೆದುಕೊಂಡು ಹೋಗಿ, ನಂತರ ನೋಟಿಸ ಕೊಟ್ಟಿರುತ್ತಾರೆ. ಬೆಳಿಗ್ಗೆ ಸುಮಾರು 11 ಗಂಟೆಗೆ ಪೊಲೀಸ ಠಾಣೆಗೆ ಹೋಗಿದ್ದೆವು. ಸದರಿ ದಿನ ಸುಮಾರು 15 ನಿಮಿಷ ಠಾಣೆಯಲ್ಲಿ ಇದ್ದೆವು. ನಾಗರಾಳ ಗ್ರಾಮ ಬೀಳಗಿಯಿಂದ ಸುಮಾರು 4-5 ಕಿ.ಮೀ ಅಂತರದಲ್ಲಿ ಇರುತ್ತದೆ ಮತ್ತು ವಾಹನದಲ್ಲಿ ಹೋದರೆ ಸುಮಾರು 10 ನಿಮಿಷ ಬೇಕಾಗುತ್ತದೆ.

2. ನಿಪಿ-9 ಮತ್ತು ನಿಪಿ-11 ಪಂಚನಾಮೆಯನ್ನು ನಾನು ಹೇಳಿದಂತೆ ದಳವಾಯಿ ಎನ್ನುವ ಸಿಬ್ಬಂದಿ ಬರೆದಿರುತ್ತಾರೆ. ಸದರಿ ಪಂಚನಾಮೆಗೆ ನಾವು ಪ್ರಕರಣದ ಸಂಖ್ಯೆಯನ್ನು ತಿಳಿಸಿರುವುದಿಲ್ಲ. ಸದರಿ ದಿನ ಸುಮಾರು ಒಂದು ಗಂಟೆ ಕಾಲ ಆರೋಪಿ ಮತ್ತು ಪೊಲೀಸರ ಜೊತೆ ಇದ್ದೆವು. ನಾಗರಾಳ ಗ್ರಾಮದಿಂದ ದೇವರಗಾಣಗಾಪೂರದ ಯೋೀಗಿರಾಜ ಮಠ ಸುಮಾರು 200 ಕಿ.ಮೀ ಅಂತರ ಇರಬಹುದು. ಸದರಿ ಯೋಗಿರಾಜ ಮಠಕ್ಕೆ ಹೋಗಲು ನಾಗರಾಳದಿಂದ ಹೋಗಲು ಸುಮಾರು 6 ಗಂಟೆ ಕಾಲ ಬೇಕಾಗುತ್ತದೆ ಎಂದರೆ ಸರಿ. ಯೋಗಿರಾಜ ಮಠಕ್ಕೆ ನಾವು ಸಂಜೆ ಸುಮಾರು 5 ಗಂಟೆಗೆ ಹೋಗಿರುತ್ತೇವೆ. ಯೋಗಿರಾಜ ಮಠ ದೇವರಗಾಣಾಪೂರ ಮಠ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ-11 ಪಂಚನಾಮೆ ಜರುಗಿಸಿದ ಸ್ಥಳದ ಚಕ್ಕುಬಂದಿ ನನಗೆ ಗೊತ್ತಿಲ್ಲ.

3. ದಿಃ 14.01.2025 ರಂದು ಬೀಳಗಿ ಪೊಲೀಸರು ನನ್ನನ್ನು ಮತ್ತು ಚಾಸಾ–9 ರವರನ್ನು ಠಾಣೆಗೆ ಬರಮಾಡಿಕೊಂಡು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಚಸಾಕ್ಷಿಯಾಗಿ ಸಹಕರಿಸಲು ಯಾವುದೇ ನೋಟಿಸ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮ್ಮನ್ನು ಮತ್ತು ಪೊಲೀಸರನ್ನು ನಾಗರಾಳ ಗ್ರಾಮದ ರಾಧಾಕೃಷ್ಣ ಶಾಲೆಯ ಪಕ್ಕದಲ್ಲಿದ್ದ ಶೆಡ್ ಹತ್ತಿರ ಕರೆದುಕೊಂಡು ಹೋಗಿರುವುದಿಲ್ಲ ಮತ್ತು ಯಾವುದೇ ಸ್ಥ,ಳ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ–9 ಮತ್ತು 10 ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿ ನಮ್ಮನ್ನು ದೇವರಗಾಣಗಾಪೂರದ ಯೋಗಿರಾಜ ಮಠಕ್ಕೆ ಕರೆದುಕೊಂಡು ಹೋಗಿರುವುದಿಲ್ಲ ಮತ್ತು ಸದರಿ ಮಠದಲ್ಲಿದ್ದ ಯಾವುದೇ ಕೊಠಡಿಯಿಂದ ಯಾವುದೇ ಬಟ್ಟೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–11 ಪಂಚನಾಮೆಯನ್ನು ಮತ್ತು ನಿಪಿ–12 ಭಾವಚಿತ್ರಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 32/2025**

| | | |
|---|---|---|
| ಹೆಸರು | : ಪಡಿಯಪ್ಪ | ಪ್ರಾಸಾ–3 |
| ತಂದೆಯ ಹೆಸರು | : ಸೂರಪ್ಪ | ಚಾಸಾ–6 |
| ವರ್ಷ | : 64 ವರ್ಷ | |
| ಉದ್ಯೋಗ | : ಒಕ್ಕಲುತನ | |
| ವಿಳಾಸ | : ನಾಗರಾಳ ತಾಃ ಬೀಳಗಿ | |

ದಿಃ 12.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಈಗ ಅಂದಾಜು ಒಂದು ವರ್ಷದ ಹಿಂದೆ ಬೆಳಿಗ್ಗೆ 10–30 ಗಂಟೆಗೆ ನಾನು ಮತ್ತು ಚಾಸಾ–7 ರವರು ಬೀಳಗಿ ಪೊಲೀಸ ಠಾಣೆಗೆ ಮುಂದೆ ಹೋಗುತ್ತಿದ್ದಾಗ, ಬೀಳಗಿ ಪೊಲೀಸರು ನಮ್ಮನ್ನು ಠಾಣೆಗೆ ಕರೆಸಿಕೊಂಡಿದ್ದು, ಠಾಣೆಯಲ್ಲಿ ರಾಠೋಡ ಎಂಬುವವರಿಗೆ ಸೇರಿದ ಟೀ–ಶರ್ಟ, ಒಂದು ನೀಲಿ ಚಡ್ಡಿ, ರಕ್ತ ಇದ್ದ EDTA ಟ್ಯೂಬ್ ಗಳನ್ನು ಪೊಲೀಸರು ನಮ್ಮ ಮುಂದೆ ಹಾಜರುಪಡಿಸಿದ್ದು, ಅವುಗಳನ್ನು ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ ಜಪ್ತಿ ಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ಎರಡು ಭಾವಚಿತ್ರಗಳನ್ನು ಸಹ ತೆಗೆಸಿರುತ್ತಾರೆ. ಸಾಕ್ಷಿ ಸದರಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–6 ಎಂದು, ಸಾಕ್ಷಿ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು. ನಿಪಿ–6 ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಶಾನೆ ಪಿ–7 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಟಿ–ಶರ್ಟ ಹಾಗೂ ನೀಲಿ ಬಣ್ಣದ ಚಡ್ಡಿ ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾಲು–7 ಮತ್ತು 8 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ದಿಃ 13.01.2025 ರಂದು ಬೀಳಗಿ ಪೊಲೀಸರು ನನಗೆ ಮತ್ತು ಚಾಸಾ–7 ರವರಿಗೆ ನೋಟಿಸ ಜಾರಿ ಮಾಡಿ ಠಾಣೆಗೆ ಬರಮಾಡಿಕೊಂಡಿದ್ದರು ಎಂದರೆ ಸರಿ. ನಂತರ ಠಾಣೆಯಲ್ಲಿ ಮೃತ ನಾಗಪ್ಪ ಎನ್ನುವವರಿಗೆ ಸೇರಿದ ಬಟ್ಟೆಗಳನ್ನು ಮತ್ತು ಮಾದರಿ ರಕ್ತವನ್ನು ಪೊಲೀಸರು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–6 ರಂತೆ ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ. ಪಿ ಹೆಚ್ ಎಂ ವಕೀಲರಿಂದ ಆರೋಪಿ ಪರ**

ಬೀಳಗಿ ಪೊಲೀಸರು ಬೆಳಿಗ್ಗೆ ಸುಮಾರು 10–30 ಗಂಟೆಗೆ ನೋಟಿಸ ಕೊಟ್ಟಿರುತ್ತಾರೆ. ನಾನು ಪೊಲೀಸ ಠಾಣೆಗೆ ಹೋಗುವಷ್ಟರಲ್ಲಿ ಪೊಲೀಸರು ನಿಪಿ–6 ಪಂಚನಾಮೆ ಬರೆದಿದ್ದರು ಮತ್ತು ಅದಕ್ಕೆ ನನ್ನ ಸಹಿ ಮಾತ್ರ ಪಡೆದುಕೊಂಡಿರುತ್ತಾರೆ. ನಿಪಿ–6 ರಲ್ಲಿ ಪಂಚನಾಮೆಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಮೃತ ನಾಗಪ್ಪನಿಗೆ ಸಂಬಂಧಿಸಿದ ಯಾವುದೇ ಬಟ್ಟೆಗಳನ್ನು ಮತ್ತು ಮಾದರಿ ರಕ್ತವನ್ನು ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .